**ಡಾ. ಎಂ.ಜಿ.ಮುಳೆ**
ಶಾಸಕರು., ಕರ್ನಾಟಕ ವಿಧಾನ ಪರಿಷತ್ತು
ಮಾಜಿ ಶಾಸಕರು ಬಸವಕಲ್ಯಾಣ
ಮಾಜಿ ಅಧ್ಯಕ್ಷರು ಕರ್ನಾಟಕ ಮರಾಠ ಸಮುದಾಯಗಳ
ಅಭಿವೃದ್ಧಿ ನಿಗಮ ನಿ., ಬೆಂಗಳೂರು
ಮೊ.: 9448132319–7483739534

**Dr. M.G.Muley**
Member., Karnataka Legislative Council
Ex-MLA Basavakalyan
Ex-Chairman Karnataka Maratha Communities
Development Corporation Ltd. Bengaluru
E-mail: mgmuley99@gmail.com

ರವರಿಗೆ,

ದಿನಾಂಕ: 15/09/2025

ಶ್ರೀ ಸಿದ್ದರಾಮಯ್ಯ ರವರು,
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಶಿವಾಜಿನಗರ ಮೆಟ್ರೋ ರೈಲು ನಿಲ್ದಾಣಕ್ಕೆ "ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ನಿಲ್ದಾಣ" ಎಂದು ನಾಮಕರಣ ಮಾಡುವ ಬಗ್ಗೆ.

*****

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 17ನೇ ಶತಮಾನದ ಮರಾಠ ಚಕ್ರವರ್ತಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ತಮ್ಮ ಬಾಲ್ಯದ ಅವಧಿಯನ್ನು ಶಿವಾಜಿನಗರ ಪ್ರದೇಶದಲ್ಲೇ ಕಳೆದಿದ್ದರು. ಮಹಾರಾಜರ ತಂದೆ ಷಹಾಜಿ ಮಹಾರಾಜರು ಬೆಂಗಳೂರಿನಲ್ಲಿ ಆಳ್ವಿಕೆ ನಡೆಸಿದ ಹಿನ್ನೆಲೆಯಲ್ಲಿ, ಅಂದಿನ ಮೈಸೂರು ಮಹಾರಾಜರು ಈ ಪ್ರದೇಶಕ್ಕೆ "ಶಿವಾಜಿನಗರ" ಎಂಬ ನಾಮಕರಣ ಮಾಡಿದ್ದರು.

ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಆಳ್ವಿಕೆಯಲ್ಲಿ ಧರ್ಮ-ಜಾತಿ ಬೇಧವಿಲ್ಲದೆ ಎಲ್ಲರನ್ನು ಸಮಾನವಾಗಿ ಗೌರವಿಸಲಾಯಿತು. ಅವರು ಮರಾಠ ಜನಾಂಗಕ್ಕೆ ಮಾತ್ರ ಸೀಮಿತರಾಗದೆ, ಎಲ್ಲಾ ಜನಾಂಗದವರನ್ನೂ ಒಗ್ಗೂಡಿಸಿ ರಾಜ್ಯಭಾರ ನಡೆಸಿದ ಸಾಧನೆಯ ಮೂಲಕ "ಹಿಂದುವಿ ಸ್ವರಾಜ್ಯ" ಸಂಸ್ಥಾಪಕರಾದರು. ಇಂದಿಗೂ ಅನೇಕ ಯುವಕರಿಗೆ ಅವರು ಶ್ರದ್ಧಾ ಮತ್ತು ಪ್ರೇರಣೆಯ ಪ್ರತೀಕರಾಗಿದ್ದಾರೆ. ಮಹಿಳೆಯರ ಬಗ್ಗೆ ಅಪಾರ ಗೌರವ ತೋರಿದ ರಾಜನಾಗಿ ಇತಿಹಾಸದಲ್ಲಿ ಹೆಸರು ಮಾಡಿರುವರು.

ಇದಲ್ಲದೆ, ಶಿವಾಜಿನಗರ ಪ್ರದೇಶದಲ್ಲಿ ಕನ್ನಡ-ಮರಾಠ ಸಮುದಾಯದವರ ವಾಸ್ತವ್ಯ ಹೆಚ್ಚಾಗಿದ್ದು, ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಹೆಸರಿನ ಶಾಶ್ವತ ಸಂಬಂಧವೂ ಈ ಪ್ರದೇಶಕ್ಕೆ ಹೊಂದಿದೆ.

ಅದರಂತೆ, ಶಿವಾಜಿನಗರ ಮೆಟ್ರೋ ರೈಲು ನಿಲ್ದಾಣಕ್ಕೆ "ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ನಿಲ್ದಾಣ" ಎಂದು ನಾಮಕರಣ ಮಾಡುವಂತೆ ಸಮಸ್ತ ಕರ್ನಾಟಕದ ಮರಾಠ ಸಮಾಜ ಹಾಗೂ ಅಖಿಲ ಭಾರತ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಅಭಿಮಾನಿಗಳ ಪರವಾಗಿ ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಡಾ. ಎಂ. ಜಿ. ಮುಳೆ
ಶಾಸಕರು-ಕರ್ನಾಟಕ ವಿಧಾನ ಪರಿಷತ್ತು
ಮಾಜಿ ಶಾಸಕರು ಬಸವಕಲ್ಯಾಣ ಹಾಗೂ
ಮಾಜಿ ಅಧ್ಯಕ್ಷರು, ಕರ್ನಾಟಕ ಮರಾಠ
ಸಮುದಾಯಗಳ ಅಭಿವೃದ್ಧಿ ನಿಗಮ ನಿ. ಬೆಂಗಳೂರು

**(ಡಾ.ಎಂ.ಜಿ.ಮುಳೆ)**